# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 581
ಮಾನ್ಯ ಸದಸ್ಯರ ಹೆಸರು : ಶ್ರೀ ಡಿ.ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ),
ಉತ್ತರಿಸುವ ದಿನಾಂಕ : **14.08.2025**
ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 7ನೇ ವೇತನ ಆಯೋಗದ ಶಿಫಾರಸ್ಸನ್ನು ಕಡೆಗಣಿಸಿ ಸರ್ಕಾರವು ದಿನಾಂಕ:01.07.2022 ರಿಂದ 31.07.2024ರ ಬ್ಲಾಕ್ ಅವಧಿಯಲ್ಲಿ ನಿವೃತ್ತ ನೌಕರರಿಗೆ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಡಿ.ಸಿ.ಆರ್.ಜಿ ಪರಿವರ್ತಿತ ಪಿಂಚಣಿ ಗಳಿಕೆ ರಜೆ ನಗಧೀಕರಣ ಪಾವತಿಸುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ; | 7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ರಾಜಸ್ವ ನೀತಿಯನ್ನು ಗಮನದಲ್ಲಿರಿಸಿ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರಿ ನೌಕರರ ವೇತನ, ಭತ್ಯೆ ಮತ್ತು ಪಿಂಚಣಿಗಳನ್ನು ದಿನಾಂಕ:01.07.2022 ರಿಂದ ಅನ್ವಯಿಸುವಂತೆ ಪರಿಷ್ಕರಿಸಿ ದಿನಾಂಕ: 01.08.2024 ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲಾಗಿರುತ್ತದೆ. ಇದು ಸರ್ಕಾರದ ನೀತಿ ನಿರ್ಣಯವಾಗಿರುತ್ತದೆ.<br><br>ಈ ಮೇಲಿನ ನಿರ್ಧಾರದಂತೆ ಅಂದರೆ, 7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ದಿನಾಂಕ:01.08.2024 ರಿಂದ ಅನುಷ್ಠಾನಗೊಳಿಸಿರುವುದರಿಂದ, ದಿನಾಂಕ: 01.07.2022 ರಿಂದ ದಿನಾಂಕ:31.07.2024 ರ ಅವಧಿಯಲ್ಲಿನ ನಿವೃತ್ತರಾದ ನೌಕರರ ಪ್ರಕರಣಗಳಲ್ಲಿ ನೌಕರರ ನಿವೃತ್ತಿ ಸಮಯದಲ್ಲಿ, ನಿಯಮಾನುಸಾರ ಲಭ್ಯವಿರುವ DCRG, ಪರಿವರ್ತಿತ ಪಿಂಚಣಿ, ಗಳಿಕೆ ರಜೆ ನಗದೀಕರಣ ಸೌಲಭ್ಯಗಳನ್ನು ಅವರು ಪಡೆಯುತ್ತಿರುವ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಮೂಲ ವೇತನವನ್ನು ಆಧಾರವಾಗಿರಿಸಿ ಪಾವತಿ ಮಾಡತಕ್ಕದ್ದಾಗಿರುತ್ತದೆ. ಆದಾಗ್ಯೂ, ದಿನಾಂಕ: 01.07.2022 ರಿಂದ ದಿನಾಂಕ:31.07.2024 ರ ಅವಧಿಯಲ್ಲಿ ನಿವೃತ್ತರಾದ ನೌಕರರ ಪ್ರಕರಣಗಳಲ್ಲಿ ಅವರ ಪಿಂಚಣಿಯನ್ನು 2024ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಲಾದ ಮೂಲ ವೇತನವನ್ನು ಆಧಾರವಾಗಿರಿಸಿ ಹೆಚ್ಚಿನ ಪಿಂಚಣಿಯನ್ನು ದಿನಾಂಕ: 01.08.2024 ರಿಂದ ಪಾವತಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಸರ್ಕಾರದ ಈ ನಿರ್ಧಾರವು ನಿವೃತ್ತ ನೌಕರರಿಗೆ ಲಾಭದಾಯಕವಾಗಿರುತ್ತದೆ.<br><br>ದಿನಾಂಕ:01.07.2022 ರಿಂದ ದಿನಾಂಕ:31.07.2024 ರ ಅವಧಿಯಲ್ಲಿ ನಿವೃತ್ತರಾದ ನೌಕರರ ಮತ್ತು ದಿನಾಂಕ:01.08.2024ರ ನಂತರ ನಿವೃತ್ತರಾದ ನೌಕರರ ಪಿಂಚಣಿ ನಿಗದಿಯಲ್ಲಿ ಯಾವುದೇ ಅಸಮಾನತೆ ಉಂಟಾಗಿರುವುದಿಲ್ಲ. |
| ಆ) | ದಿನಾಂಕ:01.07.2022 ರಿಂದ 31.07.2024ರ ಬ್ಲಾಕ್ ಅವಧಿಯಲ್ಲಿ ಸೇವೆ ಸಲ್ಲಿಸಿ, ದಿನಾಂಕ:01.08.2024ರ ನಂತರ ಸೇವಾ ನಿವೃತ್ತರಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ಡಿ.ಸಿ.ಆರ್.ಜಿ ಪರಿವರ್ತಿತ ಪಿಂಚಣಿ ಗಳಿಕೆ ರಜೆ ನಗದೀಕರಣ ನೀಡಲಾಗುತ್ತಿದ್ದು, ಇದು ತಾರತಮ್ಯವಾಗಿರುವುದಲ್ಲವೇ; | |
| ಇ) | ಈ ತಾರತಮ್ಯ ಕುರಿತು ಮಾಜಿ ಲೋಕಾಯುಕ್ತರು ಸರ್ಕಾರಕ್ಕೆ ಪತ್ರ ಬರೆದಿರುವುದನ್ನು ಸರ್ಕಾರ ಗಮನಿಸಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು? | |

**ಆಇ- ಪಿಇಎನ್/441/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ